# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : Grid Interactive Hybrid Solar Roof Top Power plants ಅಳವಡಿಕೆಗೆ ಸಂಬಂಧಿಸಿದಂತೆ ಸೋಲಾರ್ ವಿದ್ಯುತ್ ಘಟಕದ ಉಪಕರಣಗಳ ಮೇಲಿನ ಜಿ.ಎಸ್.ಟಿ ದರಗಳು ಹೆಚ್ಚಳವಾಗಿರುವುದರಿಂದ, ಸೋಲಾರ್ ಮೇಲ್ಛಾವಣಿ ವಿದ್ಯುತ್ ಘಟಕಗಳ ದರಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :
1. ಅಧಿಸೂಚನೆ ಸಂ:RDPR/12/BGS/2020 ದಿನಾಂಕ:18-04-2020
2. ಅಧಿಸೂಚನೆ ಸಂ:RDPR/12/BGS/2020(2nd Stage) ದಿನಾಂಕ:20-07-2020
3. ಟೆಂಡರ್ ಸೇರ್ಪಡೆ ಮತ್ತುತಿದ್ದೋಲೆ ಸಂ: DRDP/12/BGS/2020(2nd Stage) ದಿನಾಂಕ:05-08-2020
4. LoA ಪತ್ರ ಸಂ: KPRC/DD-4/BGS/22/2020 ದಿನಾಂಕ:22-10-2020
5. ಸಂ:ಕೆಪಿಆರ್‌ಸಿ/ಡಿಡಿ-4/ಜೈಅಯೋ/22/2020 ದಿನಾಂಕ:22-12-2020
6. ವಿತ್ತ ಸಚಿವಾಲಯ(ರಾಜಸ್ವ ವಿಭಾಗ), ಭಾರತ ಸರ್ಕಾರದ ಗೆಜೆಟ್ ಅಧಿಸೂಚನೆ ಸಂ: 8/2021-Integrated Tax(Rate) ದಿನಾಂಕ:30-09-2021

ಪ್ರಸ್ತಾವನೆ:

ಓದಲಾದ(1) ಮತ್ತು (2) ಗಳಲ್ಲಿ 2020-21 ಮತ್ತು 2021-22 ನೇ ಸಾಲಿಗೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖಾ ಕಛೇರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುವ ಕಛೇರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಕಟ್ಟಡಗಳಲ್ಲಿ Grid Interactive Hybrid Solar Roof Top Power plants ಗಳನ್ನು ಅಳವಡಿಸಲು ಕೆ.ಟಿ.ಪಿ.ಪಿ ನಿಯಮಗಳನ್ವಯ ಎರಡು ಹಂತಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಟೆಂಡರ್ ನೆಗೋಷಿಯೇಷನ್ ಕಮಿಟಿ ಹಾಗೂ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯನ್ವಯ 05 ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಿ, ಓದಲಾದ(4) ರಂತೆ Letter of Acceptance(LoA) ನೀಡಲಾಗಿದ್ದು, ಓದಲಾದ(5) ರಂತೆ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಓದಲಾದ (6) ರ ಅಧಿಸೂಚನೆಯಲ್ಲಿ ಸೋಲಾರ್ ವಿದ್ಯುತ್ ಘಟಕಗಳಿಗೆ ಸಂಬಂಧಿಸಿದ ಉಪಕರಣಗಳ ಮೇಲಿನ ಜಿ.ಎಸ್.ಟಿ ದರಗಳನ್ನು ಶೇ.5 ರಿಂದ ಶೇ.12 ಕ್ಕೆ ಪರಿಷ್ಕರಿಸಿದ್ದು, ಓದಲಾದ (3) ರ ಟೆಂಡರ್ ಸೇರ್ಪಡೆ ಮತ್ತು ತಿದ್ದೋಲೆ ಆದೇಶದ ಕ್ರ.ಸಂ.9 ರಲ್ಲಿ ಟೆಂಡರ್ ನ ಸೆಕ್ಷನ್ 5 ಕ್ಕೆ Clause 39.2 ಅನ್ನು ಸೇರ್ಪಡೆಗೊಳಿಸಿರುವಂತೆ ತೆರಿಗೆ ದರಗಳು ಹೆಚ್ಚಾದಲ್ಲಿ, ಹೆಚ್ಚುವರಿ ತೆರಿಗೆ ಮೊತ್ತವನ್ನು ಸೇರಿಸಿ ಬಿಲ್ಲನ್ನು ಪಾವತಿಸಬೇಕೆಂದು ಇರುವ ಹಿನ್ನೆಲೆಯಲ್ಲಿ, Grid Interactive Hybrid Solar Roof Top Power plants ಗಳ ಅಂತಿಮ ದರಗಳನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಪ್ರಯುಕ್ತ ಈ ಆದೇಶ:

**ಸರ್ಕಾರದ ಆದೇಶ ಸಂ: ಕೆಪಿಆರ್‌ಸಿ/ಡಿಡಿ4/214/2021**
**ಬೆಂಗಳೂರು, ದಿನಾಂಕ: 07.03.2022**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, Grid Interactive Hybrid Solar Roof Top Power plants ಗಳ ಅಳವಡಿಕೆಗೆ ಸಂಬಂಧಿಸಿದಂತೆ, ಸೋಲಾರ್ ಮೇಲ್ಛಾವಣಿ ವಿದ್ಯುತ್ ಘಟಕಗಳ ಸಾಮರ್ಥ್ಯವಾರು ಅಂತಿಮ ದರಗಳನ್ನು ಕೋಷ್ಟಕದಲ್ಲಿ ನಮೂದಿಸಿರುವಂತೆ ಪರಿಷ್ಕರಿಸಿದೆ:

| ಕ್ರ.ಸಂ | ಪ್ಯಾಕೇಜ್ | ಘಟಕದ ಹಳೆಯ ಅಂತಿಮ ದರಗಳು (ತೆರಿಗೆಗಳು ಸೇರಿ) ರೂ.ಗಳಲ್ಲಿ | ಘಟಕದ ಪರಿಷ್ಕೃತ ಅಂತಿಮ ದರಗಳು (ತೆರಿಗೆಗಳು ಸೇರಿ) ರೂ.ಗಳಲ್ಲಿ |
|---|---|---|---|
| 1 | 1 kW- 1 Hour Backup | 1,99,000 | 2,07,954 |
| 2 | 1 kW- 2 Hours Backup | 2,08,000 | 2,17,359 |
| 3 | 2 kW- 1 Hour Backup | 3,30,000 | 3,44,848 |
| 4 | 2 kW- 2 Hours Backup | 3,60,000 | 3,76,199 |
| 5 | 3 kW- 1 Hour Backup | 4,65,000 | 4,85,923 |
| 6 | 3 kW- 2 Hours Backup | 4,98,000 | 5,20,407 |
| 7 | 4 kW- 1 Hour Backup | 6,00,000 | 6,26,997 |
| 8 | 4 kW- 2 Hours Backup | 6,50,000 | 6,79,247 |
| 9 | 5 kW- 1 Hour Backup | 7,00,000 | 7,31,497 |
| 10 | 5 kW- 2 Hours Backup | 7,70,000 | 8,04,647 |
| 11 | 10 kW- 1 Hour Backup | 13,90,000 | 14,52,543 |
| 12 | 10 kW- 2 Hours Backup | 14,65,000 | 15,30,918 |

ಮೇಲಿನ ಕೋಷ್ಟಕದಲ್ಲಿನ ಪರಿಷ್ಕೃತ ದರಗಳು ದಿನಾಂಕ:**01.10.2021** ರಿಂದ ಪೂರ್ವಾನ್ವಯವಾಗಲಿದ್ದು, ದಿನಾಂಕ:01.10.2021 ಕ್ಕೆ ಮೊದಲು ಗುತ್ತಿಗೆದಾರ ಸಂಸ್ಥೆಗಳು ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸಿರುವ ಪೂರ್ಣ/ಭಾಗಶಃ ಬಿಲ್ಲುಗಳಿಗೆ ಪರಿಷ್ಕೃತ ದರಗಳು ಅನ್ವಯಿಸುವುದಿಲ್ಲವೆಂದು ಮತ್ತು ದಿನಾಂಕ:01.10.2021 ರ ನಂತರ ಸಲ್ಲಿಕೆಯಾಗುವ ಪೂರ್ಣ/ಭಾಗಶ: ಬಿಲ್ಲುಗಳನ್ನು ಮಾತ್ರ ಪರಿಷ್ಕೃತ ದರಗಳಂತೆ ಪಾವತಿಸಲು ಕ್ರಮವಹಿಸತಕ್ಕದ್ದೆಂದು ಆದೇಶಿಸಿದೆ. ಇನ್ನುಳಿದಂತೆ, ಮಾರ್ಗಸೂಚಿಯಲ್ಲಿ ವಿವರಿಸಿರುವ ಅಂಶಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ ಎಂದು ತಿಳಿಸಿದೆ.

ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಸಹಮತಿಯೊಂದಿಗೆ ಈ ಆದೇಶವನ್ನು ಹೊರಡಿಸಲಾಗಿದೆ.

ನಿರ್ದೇಶಕರು(ಗ್ರಾ.ಮೂ.ಸೌ-2)
ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮ ಪಂಚಾಯತ್ ನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. ಅರ್ಹ ಗುತ್ತಿಗೆದಾರ ಸಂಸ್ಥೆಗಳಿಗೆ ಅಗತ್ಯ ಕ್ರಮಕ್ಕಾಗಿ

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) , ಗ್ರಾಅಪ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಅಪ ಇಲಾಖೆ, ಇವರ ಆಪ್ತ ಸಹಾಯಕರಿಗೆ